O.S. No.2/2013
PW1

**ದಿಃ 07-12-2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲು ಶ್ರೀ ಟಿ ಆರ್ ಎಸ್ ವಕೀಲರಿಂದಃ</u> -ಪ್ರತಿವಾದಿಗಳ ಪರ**

ನನ್ನ ಮಾವನವರ ಹೆಸರು ಸಣ್ಣಮನೆ ಗುರುಸಿದ್ದಪ್ಪ. ನನ್ನ ಮಾವ ಗುರುಸಿದ್ದಪ್ಪನವರಿಗೆ ಒಬ್ಬ ಅಕ್ಕ ಮಹಾದೇವಮ್ಮ, ತಮ್ಮ ಪುಟ್ಟಪ್ಪ ಮತ್ತು ತಂಗಿ ನಾಗಮ್ಮ ಇರುತ್ತಾರೆ. ನನ್ನ ಮಾವ ಗುರುಸಿದ್ದಪ್ಪನವರಿಗೆ 4 ಜನ ಮಕ್ಕಳು ಅವರೆಂದರೆ ಸರೋಜಮ್ಮ, ಸಿದ್ದಲಿಂಗಮ್ಮ, ಸಿದ್ದಲಿಂಗಪ್ಪ ಮತ್ತು ರೇವಣಸಿದ್ದಪ್ಪ ಇರುತ್ತಾರೆ. ನನ್ನ ಗಂಡನ ಹೆಸರು ಸಿದ್ದಲಿಂಗಪ್ಪ ಎಂದರೆ ಸರಿ. ಸರೋಜಮ್ಮನವರ ಗಂಡನ ಹೆಸರು ನಂಜಪ್ಪ. ನಂಜಪ್ಪ ಅಂದರೆ ನನ್ನ ತಂದೆ. ನನಗೆ 3 ಜನ ಮಕ್ಕಳು ಅವರೆಂದರೆ ಪವಿತ್ರಾ, ಮೈತ್ರಾ, ಶ್ರೀಕಾಂತ ಇರುತ್ತಾರೆ. ನನ್ನ ತಂದೆ ನಂಜಪ್ಪನವರಿಗೆ 5 ಜನ ಮಕ್ಕಳು ಅವರೆಂದರೆ ಬಸವರಾಜಪ್ಪ, ಸುಜಾತ ಅಂದರೆ ನಾನೇ, ಸುನೀತಾ, ಮಂಗಳಾ, ಪುಷ್ಪಲೀಲಾ ಇರುತ್ತಾರೆ. ಬಸವರಾಜಪ್ಪನವರು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ.

ನನ್ನ ಮಾವನವರ ತಂಗಿ ನಾಗಮ್ಮ ಕೋಂ ಚನ್ನಪ್ಪನವರು ಹಗರಿಗುಡಿಹಳ್ಳಿ ವಾಸಿಯಾಗಿದ್ದಾರೆ. ಸದರಿಯವರಿಗೆ 7 ಜನ ಮಕ್ಕಳು ಅವರೆಂದರೆ ಬಸವರಾಜಪ್ಪ, ಹಾಲೇಶಪ್ಪ, ಅಜ್ಜಪ್ಪ, ಈಶಪ್ಪ, ಕೊಟ್ರಪ್ಪ, ರೇವಮ್ಮ ಮತ್ತು ಚಂದ್ರಮ್ಮ ಇರುತ್ತಾರೆ. ನಾಗಮ್ಮನವರ ಮಗ ಬಸವರಾಜಪ್ಪನವರ ಹೆಂಡತಿ ಸಿದ್ದಲಿಂಗಮ್ಮ ಅವರು ನನ್ನ ಗಂಡ ಸಿದ್ದಲಿಂಗಪ್ಪನವರ ಅಕ್ಕ ಎಂದರೆ ಸರಿ. ನಾನು ಹುಟ್ಟಿದ್ದ ಊರು ಮದುವೆಯಾದ ಊರು ಕಿತ್ತೂರು ಎಂದರೆ ಸರಿ. ನಾಗಮ್ಮನವರ ಮಗ ಬಸವರಾಜಪ್ಪನವರ ಮಗಳನ್ನು ನನ್ನ ಗಂಡನ ತಮ್ಮ ರೇವಣಸಿದ್ದಪ್ಪನಿಗೆ ಕೊಟ್ಟು ಮದುವೆ ಮಾಡಿರುತ್ತೇವೆಂದರೆ ಸರಿ. ನನ್ನ ಮಾವನವರ ತಂದೆ ತಾಯಿ ಹೆಸರು ಬಸಪ್ಪ ಮತ್ತು ಚಂದ್ರಮ್ಮ. ಚಂದ್ರಮ್ಮನವರ ತಂಗಿ ಕಾಳಮ್ಮ, ಅವರ ಮಗ ಶಿವಪ್ಪ ಮತ್ತು ಶಿವಪ್ಪನವರ ಮಗ ಷಡಕಪ್ಪನವರು ಎಂದರೆ ಸರಿ. ಸದರಿ ಷಡಕಪ್ಪನವರಿಗೆ 6 ಜನ ಮಕ್ಕಳು ಅವರೆಂದರೆ ಗೌರಮ್ಮ, ಗಿರಿಜಮ್ಮ, ನಾಗಲೀಲಾ, ಕಲಾವತಿ, ಕುಮಾರಗೌಡ, ಕರಿಬಸಜ್ಜಯ್ಯ. ಕರಿಬಸಜ್ಜಯ್ಯ ಎಂದರೆ ನಿಮ್ಮ ವಕೀಲರು ಎಂದರೆ ಸರಿ ಹಾಗೂ ಅವರ ಇನಿಷಿಯಲ್ ಕೆ ಜಿ ಕೆ ಸ್ವಾಮಿ ಎಂದರೆ ಸರಿ.

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿಗೆ ನೀವು ಗಾರ್ಡಿಯನ್ ಇದ್ದೇವೆಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇವೆಂದು ಹೇಳುತ್ತಾರೆ. ನಿಪಿ-24 ಎಂದು ಸದರಿ ದಾಖಲೆಯನ್ನು ಗುರುತಿಸಲಾಗಿದೆ. ನಿಪಿ-24 ರಲ್ಲಿರುವ 2 ನೇ ಸಾಕ್ಷಿದಾರರಾದ ನಂಜಪ್ಪ.ಸಿ ಎಂದರೆ ನನ್ನ ತಂದೆ ಇರುತ್ತಾರೆ. ಇನಿಷಿಯಲ್ ಸಿ ಎಂದರೆ ಚಿಟ್ಟೇರ ನಂಜಪ್ಪ ಎಂದು ಕರೆಯುತ್ತಾರೆ.

ಈ ಹಿಂದೆ ಮಹಾದೇಮ್ಮನವರು ಹಾಕಿರುವ ದಾವೆ ನಂ. 12-2009 ರಲ್ಲಿ ಸಾಕ್ಷಿ ನುಡಿದಿರುವ ಟಿ.ಬಸವರಾಜಪ್ಪನವರು ನನ್ನ ಮಾವ ಗುರುಸಿದ್ದಪ್ಪನವರ ತಂಗಿ ನಾಗಮ್ಮನವರ ಮಗ ಎಂದರೆ ಸರಿ. ಮಹಾದೇಮ್ಮ ಗಂಡ ಈಶ್ವರಪ್ಪ ಇವರು ತಮ್ಮ 28-29 ನೇ ವಯಸ್ಸಿನಲ್ಲಿ ವಿಧವೆಯಾಗಿರುತ್ತಾರೆ. ಸದರಿಯವರು ತಮ್ಮ 97 ನೇ ವಯಸ್ಸಿನಲ್ಲಿ ಮೃತ ಹೊಂದಿರುತ್ತಾರೆಂದರೆ ಸಾಕ್ಷಿ 97-98 ನೇ ವಯಸ್ಸಿನಲ್ಲಿ ಮೃತ ಹೊಂದಿರುತ್ತಾರೆಂದು ಹೇಳುತ್ತಾರೆ. ಹಗರಿಗುಡಿಹಳ್ಳಿ ಹರಪನಹಳ್ಳಿ ತಾಃ ಯಿಂದ ಕಿತ್ತೂರಿಗೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ 40 ಕಿ ಮೀ ಅಂತರ ಇದೆ ಎಂದು ಹೇಳುತ್ತಾರೆ. ಸದರಿ ಮಹಾದೇಮ್ಮನವರು ದಿಃ28-02-2009 ರಲ್ಲಿ ಮೃತಹೊಂದಿರುತ್ತಾರೆ.

ಮಹಾದೇಮ್ಮ ಪ್ರಥಮ ಬಾರಿಗೆ ತನ್ನ ಗಂಡನ ಮನೆಯವರ ವಿರುದ್ಧ ಪಾಲು ಕೇಳಿ ಓ ಎಸ್ ನಂ.31-2005 ರಂತೆ ದಾವೆ ಹೂಡಿದ್ದರೆಂದರೆ ಸರಿ. ನಂತರ ಸದರಿ ದಾವೆಯು ಹರಪನಹಳ್ಳಿ ನ್ಯಾಯಾಲಯಕ್ಕೆ ವರ್ಗಾವಣೆಗೊಂಡು ಓ ಎಸ್ ನಂ. 12-2009 ಎಂದು ನಂಬರಾಗಿದೆ ಎಂದರೆ ಸರಿ. 2005 ನೇ ಇಸ್ವಿಯಲ್ಲಿ ಮಹಾದೇವಮ್ಮನವರ ವಯಸ್ಸು ಎಷ್ಟು ಇತ್ತು ಎಂದರೆ ಸಾಕ್ಷಿ 60-65 ವರ್ಷ ಇರಬಹುದು.

ದತ್ತುಪತ್ರ ಮಾಡಿಕೊಂಡಿದ್ದಾರೆಂದು ಹೇಳಲಾದ ಸಮಯಕ್ಕೆ ಮಹಾದೇವಮ್ಮನವರ ವಯಸ್ಸು 71 ವರ್ಷ ಇರಬಹುದು. ವಿಲ್ ಪತ್ರ ಮಾಡಿದ್ದಾರೆಂದು ಹೇಳುವ ಕಾಲಕ್ಕೆ ಮಹಾದೇಮ್ಮನವರ ವಯಸ್ಸು 70 ವರ್ಷ.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಅನುಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ ಕೇ ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.